NAME OF THE NEWS PAPER . DATE : 13/11/20

ಕಾಯಿದೆ ಬರಖಾಸ್ತಿಗೆ ಸಚಿವ ಸಂಪುಟದಲ್ಲಿ ಮಹತ್ವದ ತೀರ್ಮಾನ । ಹಲವು ಯೋಜನೆಗಳಿಗೆ ಅಸ್ತು

# ಇನ್ನು ಸಂಸದೀಯ ಕಾರ್ಯದರ್ಶಿ ಹುದ್ದೆ ಇಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ಸಂಸದೀಯ ಕಾರ್ಯದರ್ಶಿಗಳ ನೇಮಕಕ್ಕೆ ಅವಕಾಶ ಕಲ್ಪಿಸುತ್ತಿದ್ದ ಕಾಯಿದೆ ಬರಖಾಸ್ತುಗೊಳಿಸಲು ತೀರ್ಮಾನ ಕೈಗೊಂಡಿದೆ ಎಂದು ಸಂಪುಟ ಸಭೆ ಬಳಿಕ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

''ಹಾಗಾಗಿ ಇನ್ನು ಮುಂದೆ ಸಂಸದೀಯ ಕಾರ್ಯದರ್ಶಿಗಳ ನಿಯುಕ್ತಿಗೆ ಆಸ್ಪದ ಇರುವುದಿಲ್ಲ. ಈ ನಿಟ್ಟಿನಲ್ಲಿ 'ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಸಂಕೀರ್ಣ ಉಪಬಂಧಗಳ(ನಿರಸನಗೊಳಿಸುವ) ವಿಧೇಯಕ-2020'ಕ್ಕೆ ಅನುಮೋದನೆ ನೀಡಲಾಗಿದೆ. ಸುಪ್ರೀಂಕೋರ್ಟ್ ಸೂಚನೆ ಅನುಸಾರ ಈ ತೀರ್ಮಾನ ಕೈಗೊಳ್ಳಲಾಗಿದೆ. ಹಾಲಿ ಸರಕಾರ ಯಾವುದೇ ಸಂಸದೀಯ ಕಾರ್ಯದರ್ಶಿಗಳನ್ನು ನೇಮಿಸಿಲ್ಲ. ಹಾಗಾಗಿ ಈ ಕಾಯಿದೆ ನಿರಸನಗೊಳಿಸುವುದರಿಂದ ಯಾರದೇ ಅಧಿಕಾರ ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ'' ಎಂದರು.

**ಪರ್ಯಾಯ ಮಾರ್ಗ:** ರಾಜ್ಯದಲ್ಲಿ ಬಿಜೆಪಿ ಸರಕಾರ ರಚನೆಯಾದ ಬಳಿಕ ಸಂಸದೀಯ ಕಾರ್ಯದರ್ಶಿಗಳನ್ನು ನೇಮಿಸಿಲ್ಲ. ಆದರೆ, ರಾಜಕೀಯ ಕಾರ್ಯದರ್ಶಿಗಳು, ಸಲಹೆಗಾರರನ್ನು ನೇಮಿಸಿಕೊಳ್ಳಲಾಗಿದೆ. ಅಂಥವರಿಗೆ ಸಂಪುಟ ದರ್ಜೆ, ರಾಜ್ಯ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ. ಅದರ ಅನ್ವಯ ವೇತ, ಭತ್ಯೆ ಸಂದಾಯವಾಗುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಡಜನ್‌ಗೂ ಹೆಚ್ಚು ಶಾಸಕರಿಗೆ ಸಂಸದೀಯ ಕಾರ್ಯದರ್ಶಿಗಳ ಸ್ಥಾನ ನೀಡಲಾಗಿತ್ತು.

**ಖನಿಜಾನ್ವೇಷಣೆ:** ರಾಜ್ಯದಲ್ಲಿ ಖನಿಜಾನ್ವೇಷಣೆ ಕೈಗೊಳ್ಳಲು ಕೇಂದ್ರದ ಸ್ವಾಮ್ಯದ ಕೆಐಒಸಿಎಲ್, ಎಂಇಸಿಎಲ್ ಸಂಸ್ಥೆಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಈ ಸಂಬಂಧ ಫೆಬ್ರವರಿ 20ರಂದು ಹೊರಡಿಸಿದ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ. ಜತೆಗೆ ಈ ಸಂಬಂಧ 65.20 ಕೋಟಿ ರೂ. ಒದಗಿಸಲಾಗುತ್ತಿದೆ.



ಬೆಂಗಳೂರಿನಲ್ಲಿ ಪರಿಷತ್ ಸದಸ್ಯ ಎನ್. ರವಿಕುಮಾರ ನೇತೃತ್ವದಲ್ಲಿ ಚಿತ್ರದುರ್ಗದ ಪ್ರತಿನಿಧಿಗಳು ಸಿಎಂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು.

## ಕೆಲ ಪುರಸಭೆ, ನಗರ ಸಭೆ ಮೇಲ್ದರ್ಜೆಗೆ

ನಾನಾ ಜಿಲ್ಲೆಗಳ ಗ್ರಾಮ ಪಂಚಾಯಿತಿ ಹಾಗೂ ಇತರ ಸ್ಥಳೀಯ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯ ಮಾದನಾಯಕನಹಳ್ಳಿ ಪುರಸಭೆಯನ್ನು ನಗರಸಭೆಯಾಗಿ ಪರಿವರ್ತಿಸಲಾಗುತ್ತಿದೆ. ಜತೆಗೆ ಮೈಸೂರಿನ ಹೂಟಗಳ್ಳಿ, ಹಿನಕಲ್, ಕೂರ್ಗಳ್ಳಿ, ಬೆಳವಾಡಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ನಗರಸಭೆ ರಚಿಸಲಾಗುತ್ತಿದೆ.

**ಪಟ್ಟಣ ಪಂಚಾಯಿತಿ:** ಈ ಮಧ್ಯೆ ಮೈಸೂರು ಜಿಲ್ಲೆಯಲ್ಲಿ ಶ್ರೀರಾಂಪುರ, ಬೋಗಾದಿ, ಕಡಕೋಳ, ರಮ್ಮನಹಳ್ಳಿಗಳನ್ನು ಪಟ್ಟಣ ಪಂಚಾಯಿತಿ ದರ್ಜೆಗೆ ಏರಿಸಲಾಗುವುದು. ಶಿಗ್ಗಾವಿ ಮತ್ತು ಸಿಂಧಗಿ ಪುರಸಭೆಗಳ ವ್ಯಾಪ್ತಿ ಪ್ರದೇಶ ಹೆಚ್ಚಿಸಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಯ ಆನವಟ್ಟಿ, ರಾಮನಗರ ಜಿಲ್ಲೆಯ ಹಾರೋಹಳ್ಳಿ, ಹೊಳೆಹೊನ್ನೂರು, ದಕ್ಷಿಣ ಕನ್ನಡದ ಬಜ್ಪೆ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ ದರ್ಜೆಗೆ ಏರಿಸುವ ತೀರ್ಮಾನವಾಗಿದೆ.

## ಗೋಂದಿ ನೀರಾವರಿ ಯೋಜನೆಗೆ ಸಂಪುಟ ಸಮ್ಮತಿ

ದಶಕಗಳ ಬೇಡಿಕೆಯಾದ ಚಿಕ್ಕಮಗಳೂರು ಜಿಲ್ಲೆಯ ಬಯಲುಸೀಮೆ ಪ್ರದೇಶಗಳಿಗೆ ಭದ್ರಾ ಜಲಾಶಯದಿಂದ 1281.80 ಕೋಟಿ ವೆಚ್ಚದಲ್ಲಿ 197 ಕೆರೆಗಳಿಗೆ ನೀರು ತುಂಬಿಸುವ ಗೋಂದಿ ನೀರಾವರಿ ಯೋಜನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಸಂಪುಟ ಸಭೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ಹಾಗೂ ಚಿಕ್ಕಮಗಳೂರು, ಹಾಸನ ಜಿಲ್ಲೆಯ ಅರಸೀಕೆರೆ ಸೇರಿದಂತೆ ಒಟ್ಟು 197 ಕೆರೆಗಳನ್ನು ತುಂಬಿಸುವ ಯೋಜನೆ ಇದಾಗಿದೆ. ಬಹುನಿರೀಕ್ಷಿತ ಯೋಜನೆಯು ಮೂರು ಹಂತ[illegible]ಷ್ಠಾನಗೊಳ್ಳಲಿದ್ದು, ಮೊದಲನೇ ಹಂತದ ಯೋಜನೆಗೆ 406.50 ಕೋಟಿ , 2ನೇ ಹಂತದ ಯೋಜನೆಗೆ 298.60 ಕೋಟಿ ಹಾಗೂ 3ನೇ ಹಂತದ ಯೋಜನೆಯಲ್ಲಿ 476.07 ಕೋಟಿ ವೆಚ್ಚವಾಗಲಿದೆ. ಈ ಯೋಜನೆಗೆ ಭದ್ರಾ ಜಲಾಶಯದಿಂದ 1.45 ಟಿಎಂಸಿ ನೀರು ಬಳಕೆ ಮಾಡಿಕೊಳ್ಳಲಿದೆ.

## ಮಹಿಳಾ ಸುರಕ್ಷತೆಗೆ ನಿರ್ಭಯ ಆ್ಯಪ್

ಮಹಿಳೆಯರ ಸುರಕ್ಷತೆ ಸಂಬಂಧ ನಿರ್ಭಯ ಆ್ಯಪ್ ಅಭಿವೃದ್ಧಿಪಡಿಸಲು ಸಂಪುಟ ಸಭೆ ಸಮ್ಮತಿಸಿದೆ. ಕೇಂದ್ರ ಸರಕಾರದ ಸಹಯೋಗದಡಿ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸುರಕ್ಷತಾ ಕ್ರಮ ಅಳವಡಿಸಲಾಗುತ್ತದೆ. ಈ ಉದ್ದೇಶಕ್ಕೆ 5 ಸಾವಿರ ಬಸ್‌ಗಳಲ್ಲಿ ಸಿಸಿ ಕ್ಯಾಮೆರಾ ಹಾಕಲಾಗುತ್ತದೆ. ಪ್ರಯಾಣಿಕರಿಗೆ ಬಸ್ ಹೊರಡುವ ಮತ್ತು ತಲುಪುವ ಸ್ಥಳದ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಕೇಂದ್ರ ಸರಕಾರ ಈ ಯೋಜನೆಗೆ ಶೇ.60ರಷ್ಟು ಹಣ ನೀಡುತ್ತದೆ. ಉಳಿದ ಮೊತ್ತವನ್ನು ರಾಜ್ಯ ಭರಿಸಲಾಗುತ್ತದೆ. 46 ಕೋಟಿ ರೂ. ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ

## ಮೆಡಿಕಲ್ ಕಾಲೇಜಿಗೆ ₹60 ಕೋಟಿ

**ಬೆಂಗಳೂರು:** ಚಿತ್ರದುರ್ಗ ಮೆಡಿಕಲ್ ಕಾಲೇಜಿನ ಮೂಲಸೌಕರ್ಯಕ್ಕೆ 60 ಕೋಟಿ ರೂ. ನೀಡಲು ಸಿಎಂ ಬಿ.ಎಸ್.ಯಡಿಯೂರಪ್ಪ ಆದೇಶಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ಸಿಎಂ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ''ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಉತ್ತಮ ಮೆಡಿಕಲ್ ಕಾಲೇಜು ಬೇಕು ಎಂಬ ಬೇಡಿಕೆ ಬಹಳ ವರ್ಷದಿಂದ ಇತ್ತು. [illegible] ಸ್ಪಂದಿಸಿ ಅನುದಾನ ನೀಡುತ್ತಿರುವ ಸಿಎಂ ಅವರಿಗೆ ಅಭಿನಂದನೆ,'' ಎಂದು ಹೇಳಿದರು.

**ವಿಜಯೇಂದ್ರ ಗಮನ ಸೆಳೆಯುವುದು ಸಹಜ:** ''ಶಿರಾ ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಸಂಬಂಧಿಸಿ ಪ್ರತಿಕ್ರಿಯಿಸಿದ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, ಇದು ಖುಷಿ ತಂದಿದೆ. ಕ್ಷೇತ್ರದಲ್ಲಿ ಉಸ್ತುವಾರಿಯಾಗಿ ಕೆಲಸ ಮಾಡಿದ್ದಕ್ಕೆ ತೃಪ್ತಿಯಿದೆ ಎಂದಿದ್ದಾರೆ. ಡಿಸಿಎಂ ಗೋವಿಂದ ಕಾರಜೋಳ, ಸಂಸದರಾದ ನಾರಾಯಣಸ್ವಾಮಿ, ಪಿ.ಸಿ.ಮೋಹನ್, ಪಕ್ಷದ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಮತ್ತಿತರರು ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ್ದಾರೆ,'' ಎಂದರು.

ವಿಜಯೇಂದ್ರ ಸಿಎಂ ಅವರ ಪುತ್ರರಾಗಿರುವುದರಿಂದ ಸಹಜವಾಗಿ ಗಮನ ಸೆಳೆಯುತ್ತಾರೆ. ಆದರೆ, ಈ ಗೆಲುವು ತಮ್ಮಿಂದಲೇ ಸಾಧ್ಯವಾಗಿರುವುದಾಗಿ ಅವರು ಕೂಡ ಹೇಳಿಕೊಂಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

## ಸಂಪುಟದ ತೀರ್ಮಾನಗಳು

- ಬೆಳ್ತಂಗಡಿ ತಾಲೂಕಿನ ತೋಟತ್ತಾಡಿಯಲ್ಲಿ 25 ಸೆಂಟ್ಸ್ ಜಾಗವನ್ನು ಸೇಂಟ್ ಆಂಟನಿ ಚರ್ಚ್ ಶಾಲೆಗೆ ಮಂಜೂರು.
- ನಾಗಮಂಗಲದ ಬಾಲ್ಯದ ಕೆರೆ, ಚುಂಚನಹಳ್ಳಿ ಗ್ರಾಮದ ನಾನಾ ಸರ್ವೆ ನಂಬರ್‌ನಲ್ಲಿ 32.12 ಎಕರೆಯನ್ನು ಆದಿಚುಂಚನಗಿರಿ ಮಠದ ಶೈಕ್ಷಣಿಕ ಉದ್ದೇಶಕ್ಕೆ ನೀಡಲು ಸಮ್ಮತಿ.
- ಹಾರಂಗಿ ಜಲಾನಯನ ಪ್ರದೇಶ, ನದಿ ಪಾತ್ರದ ಪುನಶ್ಚೇತನ ಮತ್ತು ರಕ್ಷಣಾ ಕಾಮಗಾರಿಗೆ 130 ಕೋಟಿ ರೂ. ಅಂದಾಜು ಪಟ್ಟಿಗೆ ಅನುಮೋದನೆ.
- ಉತ್ತರ ಕನ್ನಡದ ಮುಂಡಗೋಡು ತಾಲೂಕಿನ 5 ಗ್ರಾಮ ಪಂಚಾಯಿತಿ ವ್ಯಾಪ್ತಿಯ 84 ಸಣ್ಣ ನೀರಾವರಿ ಕೆರೆಗಳಿಗೆ ಬೇಡ್ತಿ ಉಪ ನದಿ ಕವಳಿಹಳ್ಳದಿಂದ ನೀರು ತುಂಬಿಸುವ 225 ಕೋಟಿ ರೂ. ರೂ. ಯೋಜನೆಗೆ ಅಸ್ತು.
- ಕೆಂಗ್ರೆಹೊಳೆಯಿಂದ ಶಿರಸಿ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಗೆ 31.12 ಕೋಟಿ ರೂ.
- ದೇವದುರ್ಗ ಮತ್ತು ಲಿಂಗಸುಗೂರು ಕೋರ್ಟ್ ಸಂಕೀರ್ಣಕ್ಕೆ ಕ್ರಮವಾಗಿ 13.95 ಮತ್ತು 15.82 ಕೋಟಿ ರೂ. ಅನುಮೋದನೆ.
- ಸೋಮವಾರಪೇಟೆ ತಾಲೂಕಿನ ಕುಶಾಲನಗರದಲ್ಲಿ ಕೋರ್ಟ್ ಸಂಕೀರ್ಣ ನಿರ್ಮಿಸಲು 12.50 ಕೋಟಿ ರೂ.
- ಬೆಂಗಳೂರು ವಿವಿಯ ಯುವಿಸಿಇ ಬಾಲಕರ ಹಾಸ್ಟೆಲ್ ಮತ್ತು ಜ್ಞಾನಭಾರತಿ ಆವರಣದಲ್ಲಿ ಸ್ನಾತಕೋತ್ತರ, ಪಿಎಚ್.ಡಿ ವಿದ್ಯಾರ್ಥಿಗಳ ಹಾಸ್ಟೆಲ್ ನಿರ್ಮಿಸಲು 30.85 ಕೋಟಿ ರೂ.
- ಬ್ರಹ್ಮಾವರದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ ಸೇತುವೆ ಸಹಿತ ಕಿಂಡಿ ಅಣೆಕಟ್ಟೆ ನಿರ್ಮಿಸಲು 35 ಕೋಟಿ ರೂ.
- ಬ್ರಹ್ಮಾವರದ ಹೇರೂರು ಗ್ರಾಮದ ಸೇತುವೆ ಬಳಿ ಉಪ್ಪು ನೀರು ತಡೆ ಅಣೆಕಟ್ಟೆ ನಿರ್ಮಿಸಲು 35 ಕೋಟಿ ರೂ.
- ಯಲಹಂಕ ಹೋಬಳಿ ಬಳಿ ಮಣಿಪಾಲ್ ಶಿಕ್ಷಣ ಸಂಸ್ಥೆಗೆ ಸಂಪರ್ಕ ರಸ್ತೆ ನಿರ್ಮಿಸಿಕೊಳ್ಳಲು ಅನುಮತಿ.
- ಬೆಳಗಾವಿಯಲ್ಲಿ ಬಿಜೆಪಿ ಕಚೇರಿ ನಿರ್ಮಿಸಲು 10 ಗುಂಟೆ ಮಂಜೂರು.
- ಐಐಎಸ್‌ಸಿಯಿಂದ ಆರ್ಟಿಫಿಷಿಯಲ್ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು 5 ವರ್ಷದಲ್ಲಿ 60 ಕೋಟಿ ರೂ. ಅನುದಾನ.
- ಮೈಸೂರು ಸಕ್ಕರೆ ಕಾರ್ಖಾನೆಯನ್ನು ಹೊರಗುತ್ತಿಗೆಗೆ ವಹಿಸುವ ಪ್ರಸ್ತಾವಕ್ಕೆ ಅನುಮೋದನೆ.
- ಬೆಂಗಳೂರು ಕೇಂದ್ರ ವಿವಿ ಅಭಿವೃದ್ಧಿಯ 155 ಕೋಟಿ ರೂ. ಅಂದಾಜು ಪಟ್ಟಿಗೆ ಸಮ್ಮತಿ.